(ಗೊಂದಲ)

ಅಧ್ಯಕ್ಷರು:– ಈಗ ಸದನವನ್ನು ಅರ್ಧಗಂಟೆಗಳ ಕಾಲ ಮುಂದೂಡಲಾಗುವುದು.

(ಸದನವು 3 ಗಂಟೆ 50 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಅರ್ಧಗಂಟೆಯ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಸಂಜೆ 5 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಿತು ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಭಾವಿಯಲ್ಲಿ ಧರಣಿನಿರತರಾಗಿದ್ದರು)

ಅಧ್ಯಕ್ಷರು:– ಮಾನ್ಯ ಸದಸ್ಯರುಗಳು ದಯಮಾಡಿ ತಮ್ಮ ತಮ್ಮ ಸ್ಥಳಗಳಿಗೆ ಹೋಗಬೇಕು. ಕಾರ್ಯಕಲಾಪಗಳನ್ನು ಮುಂದುವರೆಸೋಣ.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):– ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದಲೂ ಅನೇಕ ವಿಚಾರಗಳನ್ನು ದೀರ್ಘವಾಗಿ ಚರ್ಚೆ ಮಾಡಿದ ನಂತರ ಉತ್ತರ ಹೇಳಿ, ನಾನು ಎಲ್ಲ ರೀತಿಯಲ್ಲಿಯೂ ಮನವಿಯನ್ನು ಮಾಡಿಕೊಂಡಿದ್ದೇನೆ. ಈ ರಾಜ್ಯಕ್ಕೆ ಒಳ್ಳೆಯದಾಗಬೇಕು, ಈ ರೀತಿಯೆಲ್ಲಾ ಮಾಡುವುದು ಸರಿಯಲ್ಲವೆಂದು ನಾನು ಹೇಳಿದ್ದೇನೆ. ಆದರೂ ಸಹ ಮಾನ್ಯ ಕುಮಾರಸ್ವಾಮಿಯವರು ಬಹಳ ಒತ್ತಡವನ್ನು ಮಾಡಿದ್ದಾರೆ. ಇವರು ಒಂದು ಕಡೆ ಎಲ್ಲಾ ವಿಚಾರದಲ್ಲಿಯೂ ತೀವ್ರವಾದಂತಹ ತನಿಖೆಯಾಗಬೇಕೆಂಬ ಪ್ರಸ್ತಾವನೆಯನ್ನು ಮಾಡುತ್ತಿದ್ದಾರೆ. ಇದರಲ್ಲಿ ನನ್ನ ಮನವಿ ಏನೆಂದರೆ, ಕಳೆದ 8–10 ವರ್ಷಗಳಿಂದಲೂ ಸದನವು ಇಲಾಖಾ ಬೇಡಿಕೆಗಳ ಚರ್ಚೆಯನ್ನು ನಿಲ್ಲಿಸಲಾಗಿತ್ತು. ಈಗ ಇಲಾಖಾ ಬೇಡಿಕೆಗಳ ಮೇಲೆ ಚೆನ್ನಾಗಿ ಚರ್ಚೆಯಾಗುತ್ತಿದೆ. ಅದು ಈಗ ಸುಗಮವಾಗಿ ಹೋಗಬೇಕು. ಪುನಃ Floor leaders ಅನ್ನು ಕರೆಸಿ, ಮುಖ್ಯಮಂತ್ರಿಗಳು ಮತ್ತು ಎಲ್ಲರೂ ಸೇರಿ ಚರ್ಚೆ